

بسم اللهِ الرّحمٰن الرّحيم

# ವಾಗ್ದತ್ತ ಮಹ್‌ದಿ-ಮಸೀಹರ ಸತ್ಯತೆಯ ಚಿಹ್ನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಅವರು ಲಂಡನ್‌ನ 'ಬೈತುಲ್ ಫುತೂಹ್' ಮಸೀದಿಯಲ್ಲಿ ನೀಡಿದ ಶುಕ್ರವಾರದ ಖುತುಬದ ಸಾರಾಂಶ- 21.03.2014)

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:

ಈ ದಿನ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೆಲವು ಲೇಖನಗಳನ್ನೂ ಉಪದೇಶಗಳನ್ನೂ ನಿಮ್ಮ ಮುಂದಿರಿಸುತ್ತೇನೆ. ಅವುಗಳಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಸತ್ಯತೆಯ ಬಗ್ಗೆಯೂ ತನ್ನ ಪರವಾಗಿ ಕಾಣಿಸಿದ ದೃಷ್ಟಾಂತಗಳ ಬಗ್ಗೆಯೂ ಪ್ರಸ್ತಾಪಿಸಿದ್ದಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಸತ್ಯತೆಗೆ ಸಾಕ್ಷ್ಯವಾಗಿ ಸೂರ್ಯ-ಚಂದ್ರ ಗ್ರಹಣಗಳ ಬಗ್ಗೆ ಪ್ರಸ್ತಾಪಿಸುತ್ತಾ ಹೀಗೆ ಹೇಳುತ್ತಾರೆ:

'ದಾರು ಖುತ್ನಿ' ಹದೀಸು ಗ್ರಂಥದಲ್ಲಿ ಒಂದು ಹದೀಸ್ ಈರೀತಿಯಿದೆ. ಇಮಾಮ್ ಮುಹಮ್ಮದ್ ಬಾಖಿರ್ ಹೇಳುತ್ತಾರೆ:

**ಇನ್ನ ಲಿಮಹ್‌ದಿಯ್ಯಿನಾ ಆಯ ತೈನಿಲಮ್ ತಕೂನಾ ಮುನ್‌ದು ಖಲ್‌ಖಿಸ್ಸಮಾವಾತಿ ವಲ್ ಅರ್‌ಝಿ. ಯನ್‌ಕಸಿಫುಲ್ ಖಮರು ಲಿ ಅವ್ವಲಿ ಲೈಲತಿನ್ ಮಿನ್ ರಮಝಾನ ವ ತನ್‌ಕಸಿಫುಶ್ಶಮ್‌ಸು ಫಿನ್ನಿಸ್‌ಫಿ ಮಿನ್‌ಹು.**

ಅರ್ಥ: ನಮ್ಮ ಮಹ್‌ದಿಯವರಿಗೆ ಎರಡು ದೃಷ್ಟಾಂತಗಳಿವೆ. ಭೂಮ್ಯಾಕಾಶಗಳು ಸೃಷ್ಟಿಸಲ್ಪಟ್ಟ ನಂತರ ಯಾವುದೇ ಸಂದೇಶವಾಹಕ ಮತ್ತು ದೇವನಿಯುಕ್ತ ವ್ಯಕ್ತಿಯ ಕಾಲದಲ್ಲಿ ಈ ದೃಷ್ಟಾಂತಗಳು ಪ್ರಕಟಗೊಳ್ಳಲಿಲ್ಲ. ಅವುಗಳಲ್ಲಿ ಒಂದು, ಮಹ್‌ದಿಯವರ ಕಾಲದಲ್ಲಿ ರಮಝಾನ್ ತಿಂಗಳಲ್ಲಿ ಅದರ ಪ್ರಥಮ ರಾತ್ರಿ ಎಂದರೆ ರಮಝಾನ್ ತಿಂಗಳ ಹದಿಮೂರನೆಯ ದಿನಾಂಕದಲ್ಲಿ ಚಂದ್ರನಿಗೆ ಗ್ರಹಣ ಹಿಡಿಯುವುದು. ಮತ್ತು ಎರಡನೆಯ ದೃಷ್ಟಾಂತ, ಆ ದಿನಗಳ ಮಧ್ಯದ ದಿನ ಎಂದರೆ ಅದೇ ರಮಝಾನ್ ತಿಂಗಳ ಇಪ್ಪತ್ತೆಂಟನೆಯ ದಿನಾಂಕ ಸೂರ್ಯನಿಗೆ ಗ್ರಹಣ ಹಿಡಿಯುವುದು. ಇಂಗ್ಲಿಷ್ ಮತ್ತು ಉರ್ದು ಪತ್ರಿಕೆಗಳು ಮತ್ತು ಖಗೋಳ ಶಾಸ್ತ್ರಜ್ಞರು ಈ ಗ್ರಹಣಗಳ ಬಗ್ಗೆ ಸಾಕ್ಷಿಗಳಾಗಿದ್ದಾರೆ. ನನ್ನ ಕಾಲದಲ್ಲಿ ಸಂಭವಿಸಿದ ಈ ಗ್ರಹಣ ಲೋಕದ ಆರಂಭದ ಮೊದಲುಗೊಂಡು ಯಾವುದೇ ಸಂದೇಶವಾಹಕ ಅಥವಾ ಪ್ರವಾದಿಯ ಪರವಾಗಿ ಎಂದೂ ಪ್ರಕಟವಾಗಿಲ್ಲ. ಈ ದೃಷ್ಟಾಂತಗಳು ವಾಗ್ದತ್ತ ಮಹ್‌ದಿಯವರ ಕಾಲದಲ್ಲಿ ಪ್ರಕಟಗೊಳ್ಳಬೇಕೆಂದು ವಿಧಿಸಲಾಗಿತ್ತು. ಬೇರೆ ಒಂದು ಹದೀಸಿನಲ್ಲಿ ಹೇಳಿದ ಪ್ರಕಾರ ಈ ಗ್ರಹಣ ಎರಡು ಸಾರಿ ಸಂಭವಿಸಿದೆ. ಒಮ್ಮೆ ಈ ದೇಶದಲ್ಲಿ ಮತ್ತೊಮ್ಮೆ ಅಮೇರಿಕದಲ್ಲಿ. ಎರಡು ಸಾರಿ ಸಹ ಹದೀಸುಗಳಲ್ಲಿ ಸೂಚಿಸಲ್ಪಟ್ಟ ದಿನಾಂಕಗಳಲ್ಲೇ ಈ ಗ್ರಹಣಗಳು ಸಂಭವಿಸಿದುವು. ಈ ಗ್ರಹಣಗಳು ಸಂಭವಿಸುವಾಗ ವಾಗ್ದತ್ತ ಮಹ್‌ದಿ ಎಂದು ವಾದಿಸುವ ವ್ಯಕ್ತಿ ನನ್ನ ಹೊರತು ಬೇರೆ ಯಾರೂ ಭೂಲೋಕದಲ್ಲಿ ಇರಲಿಲ್ಲ. ನನ್ನ ಹಾಗೆ ಈ ದೃಷ್ಟಾಂತಗಳನ್ನು ತನ್ನ ಮಹ್‌ದಿ ವಾದಕ್ಕೆ ದೃಷ್ಟಾಂತವಾಗಿ ಸಂಭವಿಸಿದ್ದೆಂದು ಸಾವಿರಾರು ಕರಪತ್ರಗಳನ್ನೂ ಕಿರು ಪುಸ್ತಕಗಳನ್ನೂ ಉರ್ದು, ಫಾರಸೀ ಅರಬಿ ಭಾಷೆಗಳಲ್ಲಿ ಮುದ್ರಿಸಿ ಯಾರೂ ಪ್ರಕಟಿಸಲೂ ಇಲ್ಲ. ಆದುದರಿಂದ ಈ ದಿವ್ಯ ದೃಷ್ಟಾಂತ ನನ್ನ ಪರವಾಗಿಯೇ ಕಾಣಿಸಿದುದಾಗಿದೆ. ಎರಡನೆಯ ಸಾಕ್ಷ್ಯಾಧಾರವೇನೆಂದರೆ ಈ ದೃಷ್ಟಾಂತಗಳು ನನ್ನ ಪರವಾಗಿ ಪ್ರಕಟವಾಗಲಿದೆ ಎಂದು ಅಲ್ಲಾಹನೇ ನನಗೆ ಹನ್ನೆರಡು ವರ್ಷಗಳ ಹಿಂದೆ ತಿಳಿಸಿದ್ದನು. ಈ ಭವಿಷ್ಯವಾಣಿಯನ್ನು 'ಬರಾಹೀನೆ ಅಹ್ಮದಿಯಾ' ಎಂಬ ನನ್ನ ಗ್ರಂಥದಲ್ಲಿ ಬರೆಯಲಾಗಿದ್ದು ಈ ದೃಷ್ಟಾಂತಗಳು ಪ್ರಕಟಗೊಳ್ಳುವ ಮೊದಲೇ ಲಕ್ಷಾಂತರ ಜನರಲ್ಲಿ ಇದರ ಬಗ್ಗೆ ಪ್ರಚಾರಗೊಂಡಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ:

ಈ ಹದೀಸು ಹದಿಮೂರು ಶತಮಾನಗಳ ನಂತರ ಸಂಭವಿಸಲಿರುವ ಒಂದು ಅದೃಶ್ಯ ಸಂಗತಿಯನ್ನು ಪ್ರತಿಪಾದಿಸುವಂಥದ್ದಾಗಿದೆ. ಈ ಹದೀಸಿನಲ್ಲಿರುವ ಸೂಚನೆ ಏನೆಂದರೆ ವಾಗ್ದತ್ತ ಮಹ್‌ದಿಯವರು ಆಗಮಿಸುವ ಕಾಲದಲ್ಲಿ ರಮಝಾನ್ ತಿಂಗಳಲ್ಲಿ ಹದಿಮೂರನೆಯ ರಾತ್ರಿ ಚಂದ್ರಗ್ರಹಣ ಸಂಭವಿಸುವುದು. ಮತ್ತು ಅದೇ ತಿಂಗಳಲ್ಲಿ ಇಪ್ಪತ್ತೆಂಟನೆಯ ದಿನಾಂಕದ ಹಗಲು ಸೂರ್ಯಗ್ರಹಣವೂ ಸಂಭವಿಸುವುದು. ವಾಗ್ದತ್ತ ಮಹ್‌ದಿಯ ಕಾಲದಲ್ಲಿ ಹೊರತು ಬೇರೆ ಯಾವುದೇ ವಾದಿಯ ಕಾಲದಲ್ಲಿ ಈ ದೃಷ್ಟಾಂತಗಳು ಪ್ರಕಟವಾಗಲಾರವು. ಇಂತಹ ಸ್ಪಷ್ಟ ಅದೃಶ್ಯ ಕಾರ್ಯಗಳ ಬಗ್ಗೆ ಮುಂಚಿತವಾಗಿ ತಿಳಿಸಲು ಪ್ರವಾದಿಗೆ ಹೊರತು ಬೇರೆ ಯಾರಿಗೂ ಸಾಧ್ಯವಿಲ್ಲ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ:

**ಲಾ ಯುಝ್‌ಹಿರು ಅಲಾ ಗೈಬಿಹೀ ಅಹದನ್ ಇಲ್ಲಾ ಮನಿರ್‌ತಝಾ ಮಿನ್ ರಸೂಲಿನ್.**

ಅಲ್ಲಾಹನು ಅದೃಶ್ಯಕಾರ್ಯಗಳ ಬಗ್ಗೆ ಸಮಾಚಾರವನ್ನು ತನ್ನ ಆಯ್ಕೆಗೊಂಡ ಸಂದೇಶವಾಹಕರಿಗೆ ಹೊರತು ಬೇರೆ ಯಾರಿಗೂ ತಿಳಿಸುವುದಿಲ್ಲ.

ಈ ಭವಿಷ್ಯವಾಣಿ ಪರಿಪೂರ್ಣ ರೂಪದಲ್ಲಿ ಈಡೇರಿರುವಾಗ, ಈ ಹದೀಸನ್ನು ಝಈಫ್(ಬಲಹೀನ) ಎಂದೂ ಇದರಲ್ಲಿ ಇಮಾಮ್ ಮುಹಮ್ಮದ್ ಬಾಖಿರ್‌ರವರು ಹೇಳಿದ ಮಾತುಗಳು ಇವೆ ಎಂದೂ ಕ್ಷುಲ್ಲಕ ಆಕ್ಷೇಪಗಳನ್ನು ಮಾಡುವುದು ಕೇವಲ ನೆಪಕ್ಕಾಗಿ ಮಾತ್ರ. ನಿಜ ಸಂಗತಿಯೇನೆಂದರೆ, ಈ ಜನರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಭವಿಷ್ಯವಾಣಿ ಈಡೇರಲಿ ಎಂದಾಗಲಿ ಪವಿತ್ರ ಖುರ್‌ಆನಿನ ಭವಿಷ್ಯವಾಣಿ ಈಡೇರಲಿ ಎಂದಾಗಲಿ ಖಂಡಿತವಾಗಿಯೂ ಇವರು ಇಚ್ಛಿಸುವುದಿಲ್ಲ. ಈ ದೃಷ್ಟಾಂತ ಪ್ರಕಟವಾದುದು ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಭವಿಷ್ಯವಾಣಿ ಈಡೇರಿದೆ ಎಂಬುದಕ್ಕೆ ಸಾಕ್ಷ್ಯಾಧಾರವಾಗಿದೆ.

ಮತ್ತೊಂದು ದೃಷ್ಟಾಂತದ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

ಸೂರ್ಯಸ್ತಮಾನದ ನಂತರ ನನ್ನ ತಂದೆಯವರು ಮೃತರಾಗುವರು ಎಂದು ನನಗೆ ತಿಳಿಸಲ್ಪಟ್ಟಾಗ ಮನುಷ್ಯ ಸಹಜವಾಗಿ ನನಗೆ ಈ ಸಮಾಚರದಿಂದ ಮನಸ್ಸಿಗೆ ನೋವುಂಟಾಯಿತು. ನಮ್ಮ ಜೀವನಾಧಾರ ಬಹುತೇಕ ಅವರನ್ನೇ ಹೊಂದಿಕೊಂಡಿದ್ದಿತು. ಅವರು ಇಂಗ್ಲಿಷ್ ಸರಕಾರದಿಂದ ಪೆನ್‌ಶನ್ ಪಡೆಯುತ್ತಿದ್ದರು. ಅವರು ಒಂದು ದೊಡ್ಡ ಸಂಖ್ಯೆಯ ಹಣವನ್ನು ಪಾರಿತೋಷಿಕವಾಗಿ ಸಹ ಪಡೆಯುತ್ತಿದ್ದರು. ಅದು ಅವರ ಜೀವಿತ ಕಾಲಕ್ಕೆ ಸೀಮಿತವಾಗಿತ್ತು. ಆದುದರಿಂದ ಅವರು ಮೃತರಾದ ನಂತರ ನಮ್ಮ ಸ್ಥಿತಿ ಏನಾಗಬಹುದು ಎಂದು ಭಯ ಉಂಟಾಯಿತು. ಪ್ರಾಯಶಃ ದಾರಿದ್ರ್ಯ ಮತ್ತು ಕಷ್ಟದ ಕಾಲವನ್ನು ನಾವು ಕಾಣಬೇಕಾದೀತೆಂದು. ಈ ಎಲ್ಲಾ ಯೋಚನೆಗಳು ಮಿಂಚಿನ ಪ್ರಕಾಶದ ಹಾಗೆ ಒಂದು ಸೆಕೆಂಡ್‌ಗಿಂತ ಕಡಿಮೆ ಸಮಯ ನನ್ನ ಹೃದಯದಲ್ಲಿ ದಾಟಿ ಹೋದುವು. ತಕ್ಷಣ ಪ್ರಜ್ಞಾಶೂನ್ಯತೆ ಉಂಟಾಗಿ ನನಗೆ ಹೀಗೆ ಇಲ್‌ಹಾಮ್ ಅವತೀರ್ಣಗೊಂಡಿತು.

**ಅಲೈಸಲ್ಲಾಹು ಬಿಕಾಫಿನ್ ಅಬ್‌ದಹೂ**

ಅಲ್ಲಾಹನು ಅವನ ದಾಸನಿಗೆ ಸಾಕಾಗಲಾರನೆ.

ಈ ಇಲ್‌ಹಾಮ್ ಲಭಿಸಿದ ಕೂಡಲೆ ಹೃದಯ ಎಷ್ಟು ಬಲಿಷ್ಠವಾಯಿತೆಂದರೆ ಒಂದು ದೊಡ್ಡ ಗಾಯ ಒಂದು ಲೇಪನ ಹಚ್ಚಿದ ಕೂಡಲೆ ಒಣಗಿ ಹೋಗುವ ಹಾಗೆ. ಪದೇ ಪದೇ ಪರೀಕ್ಷಿಸಲಾದ ಒಂದು ವಿಷಯವೇನೆಂದರೆ ಅಲ್ಲಾಹನ ಸಂದೇಶವಾಣಿಯಲ್ಲಿ ಹೃದಯಕ್ಕೆ ಸಮಾಧಾನ ನೀಡುವ ಒಂದು ವೈಶಿಷ್ಟ್ಯತೆ ಇರುತ್ತವೆ. ಈ ವೈಶಿಷ್ಟ್ಯತೆಯ ಬೇರು ಅಲ್ಲಾಹನ ಸಂದೇಶವಾಣಿಯ ಬಗ್ಗೆ ಇರುವ ದೃಢ ನಂಬಿಕೆಯಾಗಿದೆ. ದುಃಖಕರವಾದ ವಿಷಯವೇನೆಂದರೆ ಕೆಲವು ಜನರು ತಮಗೆ ಅಲ್ಲಾಹನ ಸಂದೇಶವಾಣಿ (ಇಲ್‌ಹಾಮ್) ಲಭಿಸುತ್ತಿದೆ ಎಂದು ಹೇಳುತ್ತಾರೆ ಆದರೆ ಅದರ ಜೊತೆ ಹೀಗೆ ಹೇಳುತ್ತಾರೆ. ನಮ್ಮ ಇಲ್‌ಹಾಮ್ ಸಂದೇಹಕರವಾಗಿದೆ. ಇದು ಶೈತಾನನ ಸಂದೇಶವೋ ಅಥವಾ ರಹ್ಮಾನ್ ಆಗಿರುವ ಅಲ್ಲಾಹನದೋ ಎಂದು ತಿಳಿಯಲಾರೆವು ಎಂದು ಹೇಳುತ್ತಾರೆ. ಇಂತಹ ಇಲ್‌ಹಾಮ್‌ಗಳಿಂದ ಲಾಭಕ್ಕಿಂತ ಹಾನಿಯೇ ಹೆಚ್ಚಿಗೆ ಇದೆ.

ನಾನು ಅಲ್ಲಾಹನ ಹೆಸರಲ್ಲಿ ಪ್ರಮಾಣಮಾಡಿ ಹೇಳುತ್ತೇನೆ. ನಾನು ಪವಿತ್ರ ಖುರ್‌ಆನಿನಲ್ಲಿ ಮತ್ತು ಇತರ ಅಲ್ಲಾಹನ ಗ್ರಂಥಗಳಲ್ಲಿ ದೃಢ ವಿಶ್ವಾಸ ಹೊಂದಿರುವ ಹಾಗೆಯೇ ನನಗೆ ಲಭಿಸಿದ ಇಲ್‌ಹಾಮ್‌ಗಳ ಬಗ್ಗೆ ದೃಢ ನಂಬಿಕೆ ಹೊಂದಿದ್ದೇನೆ. ಪವಿತ್ರ ಖುರ್‌ಆನ್ ಬಗ್ಗೆ ಯಾವರೀತಿ ಅದು ಖಂಡಿತವಾಗಿಯೂ ಅಲ್ಲಾಹನ ವಚನಗಳೆಂದು ನಾನು ದೃಢ ವಿಶ್ವಾಸ ಹೊಂದಿರುವೆನೋ ಹಾಗೆಯೇ ನನಗೆ ಲಭಿಸಿದ ಇಲ್‌ಹಾಮ್‌ಗಳು ಸಹ ಅಲ್ಲಾಹನ ವಚನಗಳಾಗಿವೆ ಎಂದು ನಾನು ದೃಢವಾಗಿ ನಂಬುತ್ತೇನೆ. ಯಾಕೆಂದರೆ, ಅದರ ಜೊತೆ ದೇವನ ಪ್ರಕಾಶ ಇರುವುದನ್ನು ನಾನು ಕಾಣುತ್ತಿದ್ದೇನೆ. ಅದರ ಜೊತೆಗೆ ಅಲ್ಲಾಹನ ಶಕ್ತಿ ಸಾಮರ್ಥ್ಯಗಳ ಪ್ರಕಟಣೆಯ ಉದಾಹರಣೆಗಳನ್ನೂ ಕಾಣುತ್ತೇನೆ. ಆದುದರಿಂದ ನನಗೆ

**ಅಲೈಸಲ್ಲಾಹು ಬಿಕಾಫಿನ್ ಅಬ್‌ದಹೂ**

ಎಂಬ ಇಲ್‌ಹಾಮ್ ಅವತೀರ್ಣವಾದ ಕೂಡಲೆ ನಾನು ದೃಢ ವಿಶ್ವಾಸವನ್ನು ಹೊಂದಿದೆ– ನನ್ನನ್ನು ಅಲ್ಲಾಹನು ಎಂದೂ ಕೈಬಿಡಲಾರನೆಂದು. ಆಗ ನಾನು ಮಲಾವಮಲ್ ಎಂಬ ಖಾದಿಯಾನ್ ನಿವಾಸಿ ಹಿಂದೂ ಕ್ಷತ್ರಿಯ ವ್ಯಕ್ತಿಯನ್ನು ಕರೆದು ಎಲ್ಲಾ ವಿಷಯಗಳನ್ನು ತಿಳಿಸಿ ಆ ಇಲ್‌ಹಾಮನ್ನು ಬರೆದುಕೊಟ್ಟು ಅಮೃತ್‌ಸರಕ್ಕೆ ಕಳುಹಿಸಿದೆನು. ಮೌಲವಿ ಮುಹಮ್ಮದ್ ಶರೀಫ್ ಕಲಾನೂರಿ ಮೂಲಕ ಒಂದು ಬೆಳ್ಳಿ ಉಂಗುರದಲ್ಲಿ ಅದನ್ನು ಕೆತ್ತಿ ಮುದ್ರೆಯ ರೂಪದಲ್ಲಿ ಮಾಡಿ ತರಲು ಹೇಳಿದೆ. ನಾನು ಆ ಹಿಂದು ಮಿತ್ರನನ್ನು ಈ ಕೆಲಸಕ್ಕೆ ಕಳುಹಿಸಿದುದು ಆತನು ಈ ಭವ್ಯ ಇಲ್‌ಹಾಮ್ ಬಗ್ಗೆ ಸಾಕ್ಷಿಯಾಗಲಿಕ್ಕೆ ಆಗಿತ್ತು. ಮತ್ತು ಮೌಲವಿ ಮುಹಮ್ಮದ್ ಶರೀಫರೂ ಒಬ್ಬ ಸಾಕ್ಷಿಯಾಗಲಿಕ್ಕಾಗಿತ್ತು. ಮೌಲವಿ ಮುಹಮ್ಮದ್ ಶರೀಫರ ಮೂಲಕ ನಿರ್ಮಿಸಲಾದ ಆ ಉಂಗುರ ಕೇವಲ ಐದು ರೂಪಾಯಿ ವೆಚ್ಚದಲ್ಲಿ ತಯಾರಿಸಲ್ಪಟ್ಟು ನನಗೆ ತಲಪಿತು. ಅದು ಈಗಲೂ ನನ್ನ ಬಳಿ ಇದೆ. ಈ ಇಲ್‌ಹಾಮ್ ನನಗೆ ಅವತೀರ್ಣವಾದ ಕಾಲದಲ್ಲಿ ನಮ್ಮ ಜೀವನಾಧಾರ ನಮ್ಮ ತಂದೆಯವರ ಅಲ್ಪ ಮಟ್ಟದ ಆದಾಯವನ್ನು ಹೊಂದಿಕೊಂಡಿತ್ತು. ಆ ಕಾಲದಲ್ಲಿ ಹೊರಗಿನವರು ಯಾರೂ ನನ್ನ ಬಗ್ಗೆ ತಿಳಿದಿರಲಿಲ್ಲ. ನಾನು ಅನಾಮಿಕನಾದ ಒಬ್ಬ ವ್ಯಕ್ತಿಯಾಗಿದ್ದೆ. ನಾನು ಖಾದಿಯಾನೆಂಬ ಬರಿದಾದ ಗ್ರಾಮದಲ್ಲಿ ಅಪರಿಚಿತಾವಸ್ಥೆಯಲ್ಲಿ ಕಾಲಕಳೆಯುತ್ತಿದ್ದೆ.

ಅನಂತರ ಅಲ್ಲಾಹನು ತಾನು ಅವತೀರ್ಣಗೊಳಿಸಿದ ಭವಿಷ್ಯವಾಣಿಯ ಪ್ರಕಾರ ಒಂದು ಲೋಕವೇ ನನ್ನ ಕಡೆಗೆ ಮರಳುವ ಹಾಗೆ ಮಾಡಿದನು. ಯಾವರೀತಿ ನಿರಂತರವಾಗಿ ಆರ್ಥಿಕ ವಿಜಯಗಳನ್ನು ನನಗೆ ದಯಪಾಲಿಸಿದನೆಂದರೆ ಅದರ ಬಗ್ಗೆ ಕೃತಜ್ಞತೆ ಸೂಚಿಸಲು ನನ್ನ ಬಳಿ ಶಬ್ದಗಳಿಲ್ಲ. ನನ್ನ ಸ್ಥಿತಿಯ ಬಗ್ಗೆ ಯೋಚಿಸುವಾಗ ನನಗೆ ಮಾಹೆಯಾನ ಹತ್ತು ರೂಪಾಯಿಯ ಸಂಪಾದನೆಯಾದರೂ ಆಗುವ ಭರವಸೆ ಇರಲಿಲ್ಲ. ಆದರೆ ಬಡವರನ್ನು ಮಣ್ಣಿನಿಂದ ಎತ್ತುವವನೂ ದುರಹಂಕಾರಿಗಳನ್ನು ಮಣ್ಣಿಗೆ ಹಾಕುವವನೂ ಆಗಿರುವ ಅಲ್ಲಾಹನು ನನ್ನ ಕೈಗಳನ್ನು ಹೇಗೆ ಹಿಡಿದನೆಂದರೆ ನಾನು ದೃಢವಾಗಿ ಹೇಳುತ್ತೇನೆ ಇಷ್ಟರವರೆಗೆ ಮೂರು ಲಕ್ಷಗಳಷ್ಟು ರೂಪಾಯಿಗಳು ನನಗೆ ಬಂದಿವೆ. ಪ್ರತಿವರ್ಷ ಲಂಗರ್ ಖಾನದ (ಅತಿಥಿ ಮಂದಿರದ ಊಟದ) ಖರ್ಚು ಪ್ರತಿ ತಿಂಗಳು ಎರಡೂವರೆ ಸಾವಿರ ರೂಪಾಯಿಗಳಷ್ಟಾಗಿವೆ. ಮದರಸದ ವ್ಯವಸ್ಥೆಯ ಖರ್ಚು ಮತ್ತು ಗ್ರಂಥಗಳ ಮುದ್ರಣದ ಖರ್ಚು ಬೇರೆಯೇ ಇವೆ. ನೋಡಬೇಕಾದುದೇನೆಂದರೆ ಅಲೈಸಲ್ಲಾಹು **ಬಿಕಾಫಿನ್ ಅಬ್‌ದಹೂ** ಎಂಬ ಇಲ್‌ಹಾಮ್ ಎಷ್ಟು ಸ್ಪಷ್ಟವಾಗಿ ಮತ್ತೂ ಎಷ್ಟು ವೈಭವಶಾಲಿಯಾಗಿ ಈಡೇರಿತು ಎನ್ನುವುದಾಗಿದೆ.

ಏನು ಇದು ಒಬ್ಬ ಸುಳ್ಳುವಾದಿಯ ಕೆಲಸವೇ ಅಥವಾ ಶೈತಾನನ ಪಿಸುಗುಟ್ಟುವಿಕೆಯ ಫಲವೇ? ಖಂಡಿತವಾಗಿಯೂ ಅಲ್ಲ. ಇದು ಆ ಅಲ್ಲಾಹನ ಕೆಲಸವಾಗಿದೆ. ಅವನ ಕೈಯಲ್ಲಿಯೇ ಗೌರವವೂ ಅಪಮಾನವೂ ಇರುತ್ತವೆ. ಅವನೇ ಉಚ್ಚಸ್ಥಾನವನ್ನೂ ನೀಚಸ್ಥಾನವನ್ನೂ ನೀಡುತ್ತಾನೆ. ನನ್ನ ಹೇಳಿಕೆಯ ಬಗ್ಗೆ ನಂಬಿಕೆ ಇಲ್ಲದಿದ್ದರೆ ಇಪ್ಪತ್ತು ವರ್ಷಗಳ ಅಂಚೆ ಇಲಾಖೆಯ ದಾಖಲೆಗಳನ್ನು ಪರಿಶೀಲಿಸಿರಿ. ನನಗೆ ಆದಾಯದ ಬಾಗಿಲು ಹೇಗೆ ತೆರೆಯಲ್ಪಟ್ಟಿದೆ ಎಂದು ಆಗ ಮನವರಿಕೆ ಆಗಬಹುದು.

(ಜಮಾಅತಿನ ಅಭಿವೃಧಿ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಭವಿಷ್ಯವಾಣಿಗಳನ್ನೂ ಉಪದೇಶಗಳನ್ನೂ ವಿವರಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹರು ಹೇಳಿದರು)

ಈಗ ಅಲ್ಲಾಹನ ಅನುಗ್ರಹದಿಂದ ಲೋಕದ 204 ದೇಶಗಳಲ್ಲಿ ನಮ್ಮ ಜಮಾಅತ್ ಸ್ಥಾಪಿತವಾಗಿದೆ. ನಮ್ಮ ಜನಸಂಖ್ಯೆ ಅಲ್ಲಾಹನ ಅನುಗ್ರಹದಿಂದ ಕೋಟಿಗಳಲ್ಲಿವೆ. ಲೋಕದ ಪ್ರತಿಯೊಂದು ಮೂಲೆಯಲ್ಲಿಯೂ ಎಂ.ಟಿ.ಎ. ಮೂಲಕ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಂದೇಶ ತಲಪುತ್ತಾ ಇದೆ.

ಹಜ್ರತ್ ಖಲೀಫತುಲ್ ಮಸೀಹರು ಹಜ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಶತ್ರುಗಳಿಂದ ರಕ್ಷಣೆ ಲಭಿಸುವ ಕುರಿತು ಈ ಕೆಳಗಿನ ಇಲ್‌ಹಾಮ್ ಬಗ್ಗೆ ಪ್ರಸ್ತಾಪಿಸಿದರು.

**ಯಅ್‌ಸಿಮುಕಲ್ಲಾಹು ಮಿನ್ ಇಂದಿಹೀ ವ ಲವ್ ಲಮ್ ಯಅ್‌ಸಿಮುಕನ್ನಾಸ್.**

ಅರ್ಥ: ಅಲ್ಲಾಹನು ತಾನೇ ನಿನಗೆ ರಕ್ಷಣೆ ನೀಡುವನು. ಜನರು ನಿನಗೆ ರಕ್ಷಣೆ ನೀಡದಿದ್ದರೂ.

ಈ ಇಲ್‌ಹಾಮ್ ಬಗ್ಗೆ ವಿವರಿಸುತ್ತಾ ಪಾದರಿ ಮಾರ್ಟಿನ್ ಕ್ಲಾರ್ಕ್ ಹಜ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿರುದ್ಧ ಹತ್ಯೆಗೆ ಯತ್ನದ ದೋಷಾರೋಪ ಹೊರಿಸಿ ಮೊಕದ್ದಮೆ ಹೂಡಿದ ಬಗ್ಗೆ ವಿವರಿಸಿದರು. ಅಲ್ಲಾಹನು ಅದ್ಭುತಕರವಾಗಿ ಅವರನ್ನು ದೋಷಮುಕ್ತನಾಗಿ ಮಾಡಿದ ಬಗ್ಗೆ ಸಹ ವಿವರಿಸಿದರು.

ಈ ಘಟನೆಗೆ ಸಂಬಂಧಪಟ್ಟಂತೆ ಹಜ್ರತ್ ಖಲೀಫತುಲ್ ಮಸೀಹ್ ಇನ್ನೊಂದು ಇಲ್‌ಹಾಮ್ ಬಗ್ಗೆಯೂ ಪ್ರಸ್ತಾಪಿಸಿದರು.

**ಫಬರ್ರಅಹುಲ್ಲಾಹು ಮಿಮ್ಮಾ ಖಾಲೂ ವ ಕಾನ ಇಂದಲ್ಲಾಹಿ ವಜೀಹ.**

ಅರ್ಥ: ಅಲ್ಲಾಹನು ಆ ದೋಷಾರೋಪದಿಂದ ಅವರನ್ನು ಮುಕ್ತನನ್ನಾಗಿ ಮಾಡಿದನು. ಅವರು ಅಲ್ಲಾಹನ ಸಮೀಪದಲ್ಲಿ ಪರಿಶುದ್ಧರಾಗಿ ಗಣಿಸಲ್ಪಟ್ಟರು.

ನೋಡಿರಿ, ಇಂದಿನ ಕಾಲದಲ್ಲಿ ಸಹ ಈ ಇಲ್‌ಹಾಮ್ ಭವ್ಯವಾಗಿ ಈಡೇರುತ್ತಾ ಇದೆ. ಡಾಕ್ಟರ್ ಮಾರ್ಟಿನ್ ಕ್ಲಾರ್ಕ್ ಎಂಬ ಆ ಪಾದರಿಯ ಮರಿಮೊಮ್ಮಗ ನಮ್ಮ ಬಳಿಗೆ ಬಂದು ಸ್ಪಷ್ಟವಾಗಿ ಹೇಳಿದ್ದಾರೆ– ನಮ್ಮ ಹಿರಿಯ ಅಜ್ಜ ತಪ್ಪುಗಾರರಾಗಿದ್ದರು. ಮಿರ್ಜಾ ಗುಲಾಮ್ ಅಹ್ಮದ್ ಸತ್ಯವಾದಿಯಾಗಿದ್ದರು. ಅವರು ಜಲ್ಸದಲ್ಲಿ ಸ್ಪಷ್ಟವಾಗಿ ಹೇಳಿದ ಆ ಮಾತುಗಳು ದಾಖಲಿಸಲ್ಪಟ್ಟಿದೆ.

ಮೌಲವಿ ಗುಲಾಮ್ ದಸ್ತಗೀರ್ ಕಸೂರಿಯ ನಾಶವಾದ ಬಗ್ಗೆ ಹಜ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಹೇಳಿಕೆಗಳನ್ನು ಹಜ್ರತ್ ಖಲೀಫತುಲ್ ಮಸೀಹರು ವಿವರಿಸಿದರು. ಮೌಲವಿ ಗುಲಾಮ್ ದಸ್ತಗೀರ್ ಕಸೂರಿ ಮುಬಾಹಲದ (ಪ್ರಾರ್ಥನಾ ಸಮರದ) ಪರಿಣಾಮವಾಗಿ ನಾಶವಾಗಿದ್ದರು. ಹಾಗೆ, ಹಜ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯಕ್ಕೆ ಆ ಮೌಲವಿ ದೃಷ್ಟಾಂತವಾದರು.

ಕೊನೆಯದಾಗಿ ಹಜ್ರತ್ ಖಲೀಫತುಲ್ ಮಸೀಹರು ಹೀಗೆ ಹೇಳಿದರು:

ನಾನು ಹಜ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಗೆ ಸಂಬಂಧಿಸಿ ಕೆಲವು ದೃಷ್ಟಾಂತಗಳನ್ನು ಮಾತ್ರ ಪ್ರಸ್ತಾಪಿಸಿರುವೆನು. ಅವುಗಳು ಲಕ್ಷಗಳಲ್ಲಿದ್ದು ಅವುಗಳೆಲ್ಲ ಹಜ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಗೆ ಸಾಕ್ಷ್ಯಗಳಾಗಿವೆ. ಈ ದೃಷ್ಟಾಂತಗಳು ಈಗಲೂ ಜಾರಿಯಲ್ಲಿವೆ. ಅಲ್ಲಾಹನ ಅನುಗ್ರಹದಿಂದ ಸಾವಿರಾರು ಜನರು ಈ ದೃಷ್ಟಾಂತಗಳನ್ನು ನೋಡಿ ಅಹ್ಮದಿಯಾ ಜಮಾಅತಿಗೆ ಸೇರುತ್ತಾ ಇದ್ದಾರೆ. ಬೈಅತ್ ಮಾಡುತ್ತಾ ಇದ್ದಾರೆ. ಹಜ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಸತ್ಯವಂತರಾದ ಪ್ರೇಮಿಯ ಜಮಾಅತ್‌ನಲ್ಲಿ ಬೈಅತ್ ಮಾಡಿ ಸೇರುತ್ತಿದ್ದಾರೆ. ಕೆಲವು ಸ್ಥಳಗಳಲ್ಲಿ ಅಹ್ಮದಿಯರಿಗೆ ಕಷ್ಟಗಳುಂಟಾಗುತ್ತಾ ಇವೆ. ಇನ್‌ಶಾ ಅಲ್ಲಾಹ್ ಅವುಗಳೆಲ್ಲಾ ದೂರ ಸರಿದು ಹೋಗುವ ಕಾಲ ಬರುವುದು. ಅವುಗಳನ್ನು ನೋಡುತ್ತಾ ನಮ್ಮ ನಂಬಿಕೆಗಳು ದೃಢವಾಗುತ್ತಾ ಹೋಗುವುವು.

ಕೊನೆಗೆ ಹುಜೂರ್ ಹೇಳಿದರು: ಸಿರಿಯಾದ ಅಹ್ಮದಿಯರಿಗೂ ಪಾಕಿಸ್ತಾನದ ಅಹ್ಮದಿಯರಿಗೂ ಪ್ರಾರ್ಥನೆ ಮಾಡಬೇಕಾದ ಆವಶ್ಯಕತೆ ಇದೆ. ಈಜಿಪ್ಟಿನ ಅಹ್ಮದಿಯರಿಗೂ ಕೆಲವು ಕಷ್ಟಗಳು ಇವೆ. ಅಲ್ಲಾಹನು ಇವರೆಲ್ಲರ ಕಷ್ಟಗಳನ್ನು ದೂರ ಸರಿಸಲಿ. ಇದರ ಬಗ್ಗೆ ಸಹ ವಿಶಿಷ್ಟ ದೃಷ್ಟಾಂತಗಳನ್ನು ಕಾಣುವ ಭಾಗ್ಯ ನಮಗೆ ಲಭಿಸಲಿ. ಅಲ್ಲಿರುವ ಅಹ್ಮದಿಯರಿಗೆ ತಮ್ಮ ಧರ್ಮ ವಿಶ್ವಾಸಗಳನ್ನು ಸ್ವತಂತ್ರರಾಗಿ ಪ್ರಕಟಿಸಲು ಸಾಧ್ಯವಾಗಲಿ. ಅವರು ಅಲ್ಲಾಹನ ಸನ್ನಿಧಿಯಲ್ಲಿ ಬಾಗುವವರಾಗಲಿ. ಕೆಲವು ಸ್ಥಳಗಳಲ್ಲಿ ನಾವು ಆರಾಧನೆ ಮಾಡಬಾರದು, ನಾವು ನಮಾಜ್ ಮಾಡಬಾರದು ಎಂದು ನಮ್ಮನ್ನು ನಿರ್ಬಂಧಿಸಲಾಗುತ್ತಿದೆ. ಆ ಎಲ್ಲಾ ಸ್ಥಳಗಳಲ್ಲಿರುವ ನಿರ್ಬಂಧಗಳನ್ನು ಅಲ್ಲಾಹನು ದೂರ ಸರಿಸುವಂತಾಗಲೀ – ಆಮೀನ್.

ಜುಮುಅ ನಮಾಜಿನ ನಂತರ ಒಂದು ನಮಾಜ್ ಜನಾಜ಼ ಗಾಯಿಬ್ ಸಹ ಇದೆ. ಅದು ಅಮೇರಿಕದ ಬಾಲ್ಟಿಮೋರ್‌ನ ಲತೀಫ ಇಲ್‌ಯಾಸ್ ಸಾಹಿಬರದಾಗಿದೆ. ಅವರು ಮಾರ್ಚ್ ದಿನಾಂಕ 9ರಂದು ನಿಧನ ಹೊಂದಿದರು. ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಹುಜೂರರು ಅವರ ಸದ್ಗುಣಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು.

--------------*****--------------


*Friday Sermon delivered by Hadrath Khaleefathul Masih Al Khamis* (atba)
*at Masjid Baithul Futhuh, London on 21-03-2014*

***Kannada Translation:*** M Ubeidullah

***Revised by:*** M P Ibrahim | ***Typing:*** U Basheer Ahmad

***Published By:*** Kannada Isha'at Team

*Email*: **khutuba.kannada@gmail.com**